ತೆಗೆಯುವಂತೆ ಹೇಳುತ್ತೇವೆ. ಒಂದುವೇಳೆ ಮ್ಯಾನೇಜ್‌ಮೆಂಟ್‌ನವರು ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಸರ್ಕಾರದವರು ನಾವೇ ಏನು ಕ್ರಮವನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದು ಕೊಳ್ಳುತ್ತೇವೆಂದು ಹೇಳಬಯಸುತ್ತೇನೆ. ವಿದ್ಯಾ ಸಂಸ್ಥೆಗಳಲ್ಲಿ ಇಂಥ ಪ್ರಕರಣಗಳು ಆಗಬಾರದೆಂದು ನನ್ನ ಉದ್ದೇಶ. ಇಷ್ಟರಲ್ಲೇ ಇದಕ್ಕೆ ಸಂಬಂಧಪಟ್ಟಂತೆ ಒಂದು ತಿದ್ದುಪಡಿ ಮಸೂದೆ ಕೂಡ ಸಭೆಯ ಮುಂದೆ ಬರಲಿದೆ. ಇದು ಬಂದರೆ ಖಾಸಗೀ ಕಾಲೇಜುಗಳಲ್ಲಿ ಇಂಥಾದ್ದು ಆಗದಂತೆ ಒಂದು ಕಡಿವಾಣ ವನ್ನು ಹಾಕಿದಂತಾಗುತ್ತದೆ. ಇದರಲ್ಲಿ ಯಾರನ್ನೂ ರಕ್ಷಣೆ ಮಾಡುವುದು ಬೇಡ. ಮತ್ತು ಈ ಮಸೂದೆ ಬಂದಾಗ ಯಾರೂ ಕೂಡ ಅದರ ಬಗ್ಗೆ ರಾಜಕೀಯವನ್ನು ಮಾಡುವುದೂ ಬೇಡವೆಂದು ಕೇಳಿಕೊಳ್ಳುತ್ತೇನೆ. ಒಟ್ಟಿನಲ್ಲಿ ನಿನ್ನೆ ನಡೆದಿರತಕ್ಕ ಪ್ರಕರಣದ ಬಗ್ಗೆ ಯಾರು ಅಪರಾಧಿ ಇದ್ದಾನೆ ಅವನ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಭೀಮಣ್ಣ ಖಂಡ್ರೆ.— ಹಾಗಾದರೆ ಈಗ ಅಲ್ಲಿ ಮುಷ್ಕರ ಕುಳಿತಿರತಕ್ಕ ವಿದ್ಯಾರ್ಥಿಗಳನ್ನು ಸಂತೈಸುವುದಕ್ಕೆ ಮಂತ್ರಿಗಳ ಪೈಕಿ ಯಾರಾದರೂ ಹೋಗಿ ಬರಬೇಕೆಂದು ಹೇಳಬಯಸುತ್ತೇನೆ.

ಶ್ರೀ ಬಿ. ರಾಚಯ್ಯ.— ಈಗ ನನಗೆ ಕೆಲಸ ಇದೆ. ಆಮೇಲೆ ನಾನೇ ಹೋಗಿ ಅದನ್ನು ನೋಡುತ್ತೇನೆ.

## ಗಂಗಾವತಿ ತಾಲ್ಲೂಕ್, ಹೊಸಕೆರೆ ಕ್ಯಾಂಪಿನಲ್ಲಿ ವರದಕ್ಷಿಣೆ ವಿಚಾರದಲ್ಲಿ ಕೊಲೆಯಾಗಿರುವ ಬಗ್ಗೆ.

ಶ್ರೀ ಸಿ. ಜಿ. ಗಚ್ಚಿನವಾರ್.—ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಸಂಬಂಧಪಟ್ಟ ಮಂತ್ರಿಗಳು ಇಲ್ಲಿ ಇಲ್ಲ. ಇದೇ ತಿಂಗಳು ಅಂದರೆ ದಿನಾಂಕ ೫-೪-೧೯೮೪ರ ರಂದು ಗಂಗಾವತಿ ತಾಲ್ಲೂಕು ಹೊಸ ಕೆರೆ ಕ್ಯಾಂಪಿನಲ್ಲಿ ವಾಸ ಮಾಡತಕ್ಕ ನಾರಾಯಣ ಕಮ್ಮ ಅವರ ಮಗಳು ಚಂದ್ರಾವತಿಯನ್ನು ವರದಕ್ಷಿಣೆ ವಿಚಾರದಲ್ಲಿ ಕೊಲೆ ಮಾಡಲಾಗಿದೆ. ಸಿಂಧನೂರು ತಾಲ್ಲೂಕು ಡಾಲಿಹಾಳ ಕ್ಯಾಂಪಿನಲ್ಲಿರುವ ಮಂಳ್ಳಿಪುಡಿ ವಿಷ್ಣುವರ್ಧನ ಮೂರ್ತಿ ಎಂಬುವರಿಗೆ ಕೊಟ್ಟು ಎರಡು ವರ್ಷಗಳ ಹಿಂದೆ ಮದುವೆ ಮಾಡಲಾಗಿತ್ತು, ಲಗ್ನ ಮಾಡುವಾಗ ೨೦,೦೦೦ ವರದಕ್ಷಿಣೆ ಕೊಡುತ್ತೇನೆಂದು ಒಪ್ಪಿ, ಲಗ್ನದ ಕಾಲಬಲ್ಲಿ ೨೦,೦೦೦ ಕೊಟ್ಟು, ೧೦,೦೦೦ ಆ ಮೇಲೆ ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ, ೧೦,೦೦೦ ರೂಪಾಯಿ ಕೊಡದಿದಕ್ಕಾಗಿ ಎರಡು ವರ್ಷಗಳಿಂದ ಪೀಡಿಸಿ ೫-೪-೮೪ರಂದು ರಾತ್ರಿ ೯-೩೦ಕ್ಕೆ ಆಕೆಯ ಗಂಡ ಮಂತ್ತು ಮಾವ ಸೇರಿಕೊಂಡು ಆಕೆಯನ್ನು ಕುಡುಗೋಲು ಮತ್ತು ಬಿದಿರುಕೋಲಿನಿಂದ ಹೊಡೆದು ಕೊಲೆ ಮಾಡಿದ್ದಾರೆ. ಈ ಅಪಾದನೆಯನ್ನು ಮುಚ್ಚಿಹಾಕುವುದಕ್ಕಾಗಿ ಹೆಣವನ್ನು ಸುಟ್ಟುಹಾಕಿದ್ದಾರೆ. ಸ್ಥಳೀಯ ಪೋಲೀಸ್ ಅಧಿಕಾರಿಗಳ ತಾತ್ಸಾರದಿಂದ ಇಂಥ ಘಟನೆಯಾಗಿದೆ. ಇದರ ತೀವ್ರತೆಯನ್ನು ಗಮನಿಸಿ, ಸಿ.ಓ.ಡಿ. ತನಿಖೆಗೆ ಆಜ್ಞೆ ಮಾಡಿ, ಮೃತಳ ಕುಟುಂಬದವರಿಗೆ ನ್ಯಾಯ ದೊರಕಿಸಿಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಉಪಾಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ ಇದು ಬಹಳ ಆಶ್ಚರ್ಯದ ಸಂಗತಿ. ವರದಕ್ಷಿಣೆ ಕೊಡದ ಕಾರಣದಿಂದ ಸ್ವಂತ ಗಂಡ ತನ್ನ ಹೆಂಡತಿಯನ್ನು ಕೊಲೆ ಮಾಡಿ, ಬೆಂಕಿ ಹಚ್ಚಿದುವಂಥ ಕೇಸಿನ ಬಗ್ಗೆ ಸರ್ಕಾರ ತಕ್ಷಣ ಗಮನ ಕೊಡಲಿಲ್ಲ ಅಂದರೆ, ಗೃಹಖಾತೆ ಸರಿಯಾಗಿ ಕೆಲಸ ಮಾಡುತ್ತಿಲ್ಲವೆ? ಇದರ ಬಗ್ಗೆ ಸರ್ಕಾರದಿಂದ ಏನು ಉತ್ತರ ಬರುತ್ತದೆ ಎಂಬುದನ್ನು ನಾವು ಕೇಳಬೇಡವೆ ?

ಶ್ರೀ ಎ. ಲಕ್ಷ್ಮೀಸಾಗರ್.—ನನ್ನ ಹತ್ತಿರ ವಿವರ ಇಲ್ಲ. ರಾಜ್ಯ ಗೃಹ ಮಂತ್ರಿಯವರಿಗೆ ಕರೆ ಕಳುಹಿಸುತ್ತೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ರೀತಿ ಹೇಳಿದರೆ ಹೇಗೆ ಹೆಣ್ಣು ಮಗಳ ಗತಿ ಏನು? ಸಭೆ ಮುಗಿದ ಮೇಲೆ ನಾವೆಲ್ಲಾ ಊರಿಗೆ ಹೋಗುತ್ತೇವೆ, ನಿರಪರಾಧಿ ಹೆಣ್ಣು ಮಕ್ಕಳ ಗತಿ ಏನು? ಮಾನ್ಯ ಮಂತ್ರಿಯವರು ಸರಿಯಾದ ಉತ್ತರ ಒದಗಿಸಬೇಕೆಂದು ಒತ್ತಾಯ ಮಾಡುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ರಾಜ್ಯ ಗೃಹ ಮಂತ್ರಿಯವರಿಗೆ ಕರೆಕಳುಹಿಸುತ್ತೇನೆ. ಸಾಧ್ಯವಾದರೆ ಸಭೆಗೆ ತಕ್ಷಣ ಉತ್ತರ ಕೊಡಬೇಕೆಂದು ಹೇಳುತ್ತೇನೆ. ಮಾನ್ಯ ಸದಸ್ಯರು ನೇಣು ಹಾಕಬೇಕೆಂದರೆ ಹಾಕಬೇಕು. ಆಗ ಅವರಿಗೆ ಸಮಾಧಾನವಾಗಬಹುದು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಸ್ವಾಮಿ, ನಾವು ಸರ್ಕಾರಕ್ಕೆ ಬೆಂಬಲ ಕೊಡುತ್ತಿದ್ದೇವೆ. ಗಂಭೀರವಾದ ವಿಷಯವನ್ನು ಪ್ರಸ್ತಾಪ ಮಾಡಿದಾಗ ಸರ್ಕಾರದವರು ತೀವ್ರತೆಯಿಂದ ಗಮನ ಕೊಡಬೇಕು. ಆ ರೀತಿ ಗಮನಕೊಡುತ್ತಿಲ್ಲ. ಮಾನ್ಯ ಮುಖ್ಯಮಂತ್ರಿಯವರನ್ನು ಸಭೆಗೆ ಕರೆಸಿ.

ಶ್ರೀ ಎ. ಲಕ್ಷ್ಮಣಸಾಗರ್.—ಕರೆಸುತ್ತೇನೆ.

ಉಪಾಧ್ಯಕ್ಷರು.—ಕರೆಸುತ್ತೇನೆಂದು ಹೇಳಿದ್ದಾರೆ.

The illegal and f rcible eviction of Major P.D. Dalal from the House No. 5, Lalbagh Road, Bangalore. on 9-4-1984.

ಶ್ರೀ ಎಂ. ವೀರಪ್ಪಮೊಯ್ಲಿ.—ಸನ್ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ನಡೆದಂಥ ವಿಶೇಷವಾದ ವಿಚಾರವಿದು. ಯಾವರೀತಿಯಲ್ಲಿ ಶ್ರೀಮಂತರೂ ಪೋಲೀಸಿನವರು ಸಹಾಯವನ್ನು ಪಡೆದು ಒಬ್ಬರಿಗೆ ಅನ್ಯಾಯ ಮಾಡಲಿಕ್ಕೆ ಹೊರಟ್ಟಿದ್ದಾರೆನ್ನುವುದಕ್ಕೆ ಇದು ಒಂದು ನಿದರ್ಶನ. ೯-೪-೧೯೮೪ರಲ್ಲಿ ಆರ್ಮಿ ಮೇಜರ್ ಪಿ.ಡಿ. ದಲಾಲ್ He is an ex-Army officer, He is also one of the battle casualities along with his brother-in-Law. ಪಾಕಿಸ್ತಾನ ಯುದ್ಧದಲ್ಲಿ ಗಾಯಾಳುಗಳಾಗಿ ಕೂಡ ದುಡಿದಿದ್ದಾರೆ. ಇವರಿಗೆ ಹೌಸ್ ರೆಂಟ್ ಕಂಟ್ರೋಲರ್ ಒಂದು ಮನೆ ಅಲಾಟ್ ಮಾಡಿದ್ದಾರೆ. ಅಲಾಟ್‌ಮೆಂಟ್ ಮಾಡಿರತಕ್ಕವರು ಸಿವಿಲ್ ಏರಿಯಾದ ರೆಂಟ್ ಅಂಡ್ ಅಕಾಮಡೇಷನ್ ಕಂಟ್ರೋಲರ್‌ರವರು ಬೆಂಗಳೂರು ನಗರದ ಶಾಲ್‌ಬಾಗ್ ರಸ್ತೆ, ಮನೆ ನಂ ೫ನ್ನು ಅಲಾಟ್ ಮಾಡಿದ್ದಾರೆ. ಮನೆ ಅಲಾಟ್ ಮಾಡಿದ ಮೇಲೆ ಬಾಡಿಗೆಯ ಹಣವನ್ನು ಶ್ರೀಮತಿ ಶಿವಗಾಮಿ ಎನ್ನುವವರು ತೆಗೆದುಕೊಳ್ಳುತ್ತಿದ್ದರು. ಇದಕ್ಕೆ ಸಂಬಂಧಪಟ್ಟ ಕೇಸ್ ನಂ. ಹೆಚ್‌ಆರ್‌ಎಸ್. ಎಫ್.ಆರ್. ೧೫—೮೧ರ ಪ್ರಕಾರ ಅಲಾಟ್‌ಮೆಂಟ್ ಮಾಡಿದ್ದಾರೆ. ರೆಂಟ್‌ಕಂಟ್ರೋಲರ್ ಆರ್ಡರ್ ಕೂಡ ಇದೆ In the result I hereby order that the fair rent application made by the petitioner who is a lawful subject at any rate is maintainable under section 14 of the Act. ರೆಸಪಾಂಡೆಂಟ್ ಯಾರು ಶ್ರೀಮತಿ ರಾಮಲಿಂಗಮ್ ಶಿವಗಾಮಿ ಎನ್ನುವವರು, ಇವರು ಕೂಡ ಒಂದು ಭಾಗದಲ್ಲಿದ್ದಾರೆ. ಪೀಪಲ್ ಚಾರಿಟಬಲ್ ಟ್ರಸ್ಟ್‌ನ ಬಾಡಿಗೆ ವಸೂಲು ಮಾಡಿಕೊಂಡು ಕಟ್ಟಿಡದ ಒಂದು ಭಾಗದಲ್ಲಿ ಇದ್ದಾರೆ. ಗಂಗಮ್ಮಾಳ್ ಎನ್ನುವವರು ಮತ್ತೊಂದು ಭಾಗದಲ್ಲಿದ್ದಾರೆ. ಒಪ್ಪಂದ ಮಾಡಿಕೊಂಡಂತೆ ಇವರನ್ನು ತೆಗೆಯುಬೇಕು. They entered into some colusive deal with Ranka Brothers from Bombay appartment builders. ಒಂದು ಪೋರ್ಷನ್‌ಲ್ಲಿ ಕೊಲಿಸೀವ ಡಿಕ್ರಿ ತೆಗೆದುಕೊಂಡವರು ಇದ್ದಾರೆ. ಆ ಡಿಕ್ರಿ ಎಕ್ಸಿಕ್ಯೂಷನ್ ಆರ್ಡರ್ ಕೂಡ ಇದೆ. ಅದು Execution order No. 21/80 before the Bangalore City Civil Judge, Bangalore City. ಇದರಿಂದ ಅನುಕೂಲಸ್ಥರು ಕಾನೂನು ಕೈಗೆ ತೆಗೆದುಕೊಂಡು ಕೆಲಸ ಮಾಡುತ್ತಾರೆನ್ನುವುದು ಗೊತ್ತಾಗುತ್ತದೆ. ನನ್ನಲ್ಲಿ ಎಲ್ಲಾ ದಾಖಲೆಗಳು ಇವೆ, ನಾನು ಸಂಪೂರ್ಣವಾಗಿ ಅಭ್ಯಾಸ ಮಾಡಿ ಹೇಳುತ್ತಿದ್ದೇನೆ. ಈ ವಿಚಾರದಲ್ಲಿ ಸರಿಯಾಗಿ ಕೆಲಸ ಮಾಡಿಲ್ಲವೆಂದು ಮೇಜರ್ ದಲಾಲ್ ಅರ್ಜಿ ಹಾಕಿಕೊಂಡಿದ್ದಾರೆ ಅವರು ವಾರೆಂಟ್ ಎಕ್ಸಿಕ್ಯೂಟ್ ಮಾಡಕೂಡದು, ರಕ್ಷಣೆ ಕೊಡಬೇಕೆಂದು ಹೇಳಿದಾಗ This is the order. I have this certified copy of that execution order No. 21/80. Decree holder's counsel orally opposes the application since the court has not passed any order specifically against the applicant. The applicant is Major Dalal. "The matter of delivery of possession and the suspension of order dated 5-4-1984 does not arise. Hence the application of the applicants is rejected". This is the order.

If the other party want to suffer a decree, they are entitled to take it. But there is no decree against them. They are lawful tenents. not in collusion with somebody. It has been obtained